## ೧. ರಾಗ – ಕಲ್ಯಾಣಿ : ತಾಳ – ಏಕತಾಳ

**ಹರಹರ ಪುರಹರ ಗಿರಿಜಾ ಮನೋಹರ**

ಹರಹರ ಪುರಹರ ಗಿರಿಜಾ ಮನೋಹರ
ಸುರವರ ಕರುಣಾಕರ ಶರಣರ ಸುರತರು
ವರಪಂಪಾಪತಿ ವಿರುಪಾಂಬಕ ಹೋ ಶುಭದ ।ಪ।

ಮದನನ ಮಥನ ಪಂಚವದನ ಕೈಲಾಸದ
ಸದನ ಸದಾಶಿವ ನಮೋ ನಮೋ
ಹದಿನಾಕು ಭುವನದ ಹದನ ಬಲ್ಲರಿಜಿತ
ಕದನ ಕಲುಷಹರ ನಮೋ ನಮೋ ।೧।
ತಾರಕಪತಿವರ ಭೂರಿಕೃಪಾಂಬುಧಿ
ತಾರಕ ಪಿತಹರ ಜಯಾ ಜಯ
ತಾರಕ ಉಪದೇಶಕಾರಕ ಘನಭವ
ತಾರಕ ಮೃತ್ಯುಂಜಯಾ ಜಯ ।೨।

ಶೇಷಾಭರಣ ವಿಭೂಷಾಭವ ವಿ–
ಶೇಷಾಭಕುತಪ್ರಿಯ ವಿಭೊ
ಶೇಷಾ ಭೂಭೃತಪೋಷ ಪ್ರಸನ್ವೆಂಕ
ಟೇಶ ಭಜನ ಶೀಲ ವಿಭೊ ವಿಭೊ ।೩।

## ೨. ರಾಮನ ನೋಡಿರೈ ರಘುಕುಲ

ರಾಮನ ನೋಡಿರೈ ರಘುಕುಲ
ಸೋಮನ ಪಾಡಿರೈ ।ಪ।
ಜೀಮೂತ ಶ್ಯಾಮಲಕಾಯ ಜನಕ
ಜಾಮಾತ ಸೀತಾಕಾಂತ ।ಅ.ಪ।
ಕೋಟಿದಿವಾಕರನಿಭ ಮಕುಟದ ಮಸ್ತಕದ ಮುದ್ದಿನ ಮುಖದ
ನೀಟಹ ಪಣೆಯಲಿ ಮೃಗಮದ ಪುಂಡ್ರ ತಿಲಕದ ನೀಲಾಳಕದ
ಮಾಟಕ ಮದನನ ಬಿಲ್ಲ ಹಳಿವ ಹುಬ್ಬುಗಳ ಇತ್ತುಂಡಗಳ
ನೋಟದಿ ದಯಾರಸ ಸೂಸುವ ಕಮಲದಳಗಳ ಸಮನಯನಗಳ ।೧।
ಎಸೆವ ಸುನಾಸಿಕ ಜ್ವಲಿತ ಕುಂಡಲ ಸ್ಮಿತವದನ ಶಶಿಸಮರದನ
ಹೊಸ ತುಲಸಿಯ ಮಂಜರಿ ವನಮಾಲಾಧರನ ಸತ್ಕಂಧರನ
ಮಿಸುನಿಯ ವೈಜಯಂತಿ ತ್ರಿಸರವು ದಿವ್ಯಪದಕಗಳ ಝಳ ಝಳಪುಗಳ
ಲಸತ್ ಶ್ರೀವತ್ಸ ವಕ್ಷದಿ ಕುಂಕುಮ ಚಂದನದ ಗುಣಗಣಘನದ ।೨।

---

ಇ.ರಾಗ – ಸಾರಂಗ : ತಾಳ – ಅಟತಾಳ

## ಆನೆ ಬಂತಾನೆ ಬಂತಾನೆ ಬಂತಮ್ಮಮ್ಮ

ಆನೆ ಬಂತಾನೆ ಬಂತಾನೆ ಬಂತಮ್ಮಮ್ಮ
ದಾನವಕದಳಿಯ ಕಾನನ ಮುರಿಯುತ ।ಪ।
ಉಂಗುರಗೊರಳ ನೀಲಾಂಗಚೆಲ್ವಾನೆ
ಕಂಗಳಿಗ್ಹೊಳೆವ ವ್ಯಾಘ್ರಾಂಗುಳಿಯಾನೆ
ಭಂಗಾರದಣುಘಂಟೆ ಶೃಂಗಾರದಾನೆ
ಮಂಗಳತಿಲಕದ ರಂಗನೆಂಬಾನೆ ।೧।
ಕೆಳದಿ ಗೋಪಿಯರೊಳು ಗೆಳೆತನದಾನೆ
ಸುಲಭದಿಂದೊಲಿಯುವ ಎಳೆಮರಿಯಾನೆ

ಫಲಿರುಫಲಿರುರವದಿ ನಲಿದಾಡುವಾನೆ
ಮಲೆತವರೆದೆಮ್ಯಾಲೆ ತುಳಿದಾಡುವಾನೆ ।೨।
ನಳಿನಜಭವರಿಗೆ ನಿಲುಕದ ಆನೆ
ಒಲವಿಂದ ಭಕುತರ ಸಲಹುವ ಆನೆ
ಹಲವು ಕವಿಗಳಿಗೆ ಸಿಲುಕದ ಆನೆ
ಬಲಪ್ರಸನ್ವೆಂಕಟನಿಲಯನೆಂಬಾನೆ ।೩।

---

## ೪.ರಂಗ ಕೊಳಲನೂದಲಾಗಿ

ರಂಗ ಕೊಳಲನೂದಲಾಗಿ
ಮಂಗಳ ಮಯವಾಯಿತು ಧರೆ ಜ
ಗಂಗಳ ಜೀವರು ಚೇತನ ಮರೆದು ರಂಗಧ್ಯಾನ ಪರರಾದರು ।ಪ।
ಬಾಡಿದ ಬಳ್ಳಿಮರ ಗೊನೆ ಒಡೆದು
ತೀಡುವ ಮಂದಮಾರುತನ ಕೂಡಿ ತೂ
ಗ್ಯಾಡಿದವಲರ ಫಲದ ಗೊಂಚಲು ಹಾಡಲೊಲ್ಲವಳಿ ಕುಲಗಳು
ಹೇಡಿಗೊಂಡವು ಜಾಣ್ವಕ್ಕಿ ಗಿಣಿಯು ಮಾ
ತಾಡದೆ ಗಳಗುಂದಿದವು ಕೋಗಿಲೆ
ಓಡ್ಯಾಟ ವೈರಾಟ ಬಿಟ್ಟು ಖಗಮೃಗವೆಲ್ಲ ಗಾಢ ನಿದ್ರಾವಶವಾದವು।೧।

ಕೆಳಗಿನುದಕುಬ್ಬುಬ್ಬಿ ಬಂದವು
ತುಳುಕಿ ಚೆಲ್ಲಾಡಿ ನಿಂತಳು ಯಮುನೆ
ಮೇಲೊಡ್ಡೊಡ್ಡಿ ಮೇಘಾಳಿ ಧಾರಿಟ್ಟವು ಕಲ್ಲು ಕರಗಿ ನೀರಾದವು
ನಳಿನ ಚಂಪಕ ನಾಗ ಪುನ್ನಾಗ ಪಾ
ಟಲ ಶಾವಂತಿಗೆ ಕುಂದ ಬಕುಳವು

ಮಾಲತಿ ಜಾಜಿಯು ಪರಿಮಳಗೂಡಿ ನೀಲಾಂಗನಂಘ್ರಿಗೆ ನೆರೆದವು ।೨।
ಕೆಚ್ಚಲು ಬಿಗಿದು ತೊರೆದ ಮೊಲೆಯಿಂ
ವತ್ಸಗಳೊಡಲಾಸೆ ಜರಿದೆಳಹುಲ್ಲ
ಕಚ್ಚಿ ಅಲ್ಲಿಗಲ್ಲಿಗೆ ನಿಂತವು ತಲೆಯ ಪುಚ್ಛವ ನೆಗಹಿ ನಿಟ್ಟಿಸಿ
ಅಚ್ಯುತನಾ ಕೃತ್ಯ ನೋಡಲು ಸುರರಿ
ಗಚ್ಚರಿಯಾಯಿತು ಆವು ಕಂಡಾನಂದ
ಹೆಚ್ಚಿ ಮುಕುಂದನ ಲೀಲಾವಿನೋದಕೆ ಮೆಚ್ಚಿ ಕುಸುಮವ ಸುರಿದರು।೩।

ಮುದ್ದು ಮೋಹನನ ಮಂಜುಳ ಸಂಗೀತ
ಸದ್ದನಾಲಿಸಿ ಗೋಪಾಂಗನೆರೆಲ್ಲರು
ಬುದ್ಧಿ ಸೂರ್ಯಾಡಿದರಾನಂದವಾರಿಧಿಯಲ್ಲಿ ಬಿದ್ದು ಪರವಶರಾದರು
ಸಿದ್ಧ ಮುನಿಜನರಿದ್ದ ಸಮಾಧಿಯೊ
ಳೆದ್ದೆದ್ದು ಕುಣಿದು ಎದೆದಾವರೆಯ
ಗದ್ದುಗೆಯರಸನೊಲಿಸಿಕೊಂಡರು ಗೆದ್ದರು ಭವಸಮುದ್ರವ ।೪।

ಶ್ರೀ ಮನೋಹರ ಮೂರುತಿ ಗೋಪಾಲನು
ಆ ಮಧುಕುಂಜವನದಲ್ಲಿ ತ್ರಿಭಂಗಿಲಿ
ಹೇಮಾಂಬರುಟ್ಟು ಗೀರುಗಂಧ ಕಸ್ತೂರಿನಾಮ ಮುಕುಟ
ಕುಂಡಲ್ವೆಳಗಲು ದಾಮ ವನಮಾಲೆ ರತ್ನಾಭರಣದ
ಸ್ವಾಮಿ ಶ್ರೀ ಪ್ರಸನ್ವೆಂಕಟ ಕೃಷ್ಣನು
ರಾಮಕ್ರಿಯೆ ಗುಂಡಕ್ರಿಯೆ ಮೇಘರಾಗವ ಮಾಡೆ
ಸಾಮವೇದ ನಮೋ ನಮೋ ಎನ್ನೆ ।೫।

----------

೫.ರಾ ಗ – ಕಾ ೦ ಬೋ ದಿ : ತಾ ಳ – ಝು ೦ ಪೆ ತಾ ಳ

ಪ್ರಹ್ಲಾದವರದ ಭಯ ಗಜಕೆ ಸಿಂಹ ಪರಮ
ಆಹ್ಲಾದ ಪದವಿತ್ತು ಪೊರೆಯೊ ನರಸಿಂಹ ।ಪ।
ಹಿಂದೆ ಹಿರಣ್ಯಕನಲ್ಲಿ ಜನಿಸಿದ ಪ್ರಹ್ಲಾದ
ನೊಂದವನ ಬಾಧೆಯಲಿ ಮರುಗಿ ಸೊರಗಿ
ಇಂದಿರೇಶ ಸಲಹೆನಲು ಗಾಢಸ್ತಂಭದಲೊದಗಿ
ಬಂದವನುದರ ಬಗೆದೆ ರುದಿರವನು ಸವಿದೆ ।೧।
ಅಸುರ ಕೆಡಲದಕಂಡು ಅತಿಹರುಷದಿಂದ ತ್ರಿ–
ದಶಶಂಬರದಿ ಪೂಮಳೆಗರೆಯಲು
ಶಿಶುವೇಕ ಮಾನಸದಿ ಮೊರೆಹೊಕ್ಕು ಪೊಗಳುತಿರೆ
ಬಿಸಜಾಕ್ಷನ ಕರುಣದಿಂದ ಸಲಹಿದೆಯಾಗಿ ।@।
ಹಲವು ಯೋನಿಗಳಲ್ಲಿ ತಿರುಗಿ ಬಳಲಿದೆನಯ್ಯ
ನಳಿನಾಕ್ಷ ನಿಮ್ಮ ಗುರುತವ ಕಾಣದೆ
ಇಳೆಯಲ್ಲಿ ದ್ವಿಜನಾಗಿ ಪುಟ್ಟಿ ತವ ಪದಪಿಡಿದೆ
ಗೆಲಿಸು ಭವದುರಿತ ಪ್ರಸನ್ವೆಂಕಟ ನೃಸಿಂಹ ।೩।

## ೬.ಆಗಲಿ ಹರಿಕೃಪೆ ಭಾಗವತರ ಸಂಗ

ಆಗಲಿ ಹರಿಕೃಪೆ ಭಾಗವತರ ಸಂಗ
ನೀಗುವೆ ನಿಮ್ಮ ದುರಿತಗಳಿರ ।ಪ।
ಹರಿನಂಟರೋಲೈಸಿ ಜ್ಞಾನಾಸ್ತ್ರ ಗಳಿಸುವೆ
ಹರಿನಾಮ ವಜ್ರಕವಚ ತೊಡುವೆ
ಹರಿ ನಿರ್ಮಾಲ್ಯದ ಉತ್ತಮಾಂಗಾಭರಣವಿಟ್ಟು
ನೆರೆ ನಿಮ್ಮ ನಾಮ ನಿರ್ನಾಮವ ಮಾಳ್ಪೆ ।೧।

ಶ್ರೀಲೋಲನಂಘ್ರಿ ಸಮ್ಮದ ಸೈನ್ಯವ ಕೂಡಿ
ತಾಳ ದಂಡಿಗೆ ಗೀತಾಯುಧಗಳಿಂದ
ಕಾಲಕಾಲಕೆ ನಿಮ್ಮ ಮೇಳವ ಮುರಿದಾಡಿ
ಹಾಳು ಮಾಡುವೆ ಕೈಯಲಿ ಕಡ್ಡಿ ಕೊಡುವೆ ।೨।
ಇಕ್ಷು ಸ್ವಾದಾದರೆ ಬೇರಸಹಿತ ನೀವು
ಭಕ್ಷಿಸಬೇಡಿ ಬಾರದೆ ಮರಳಿ
ಪಕ್ಷಿಗಮನ ಪ್ರಸನ್ನವೆಂಕಟೇಶನ
ಪಕ್ಷದವರ ಹಗೆ ಹೊಲ್ಲಸಲ್ಲ ।೩।

---

## ೭.ಎಂದು ಕಾಂಬುವೆ ಎನ್ನ ಸಲಹುವ

ಎಂದು ಕಾಂಬುವೆ ಎನ್ನ ಸಲಹುವ
ತಂದೆ ಉಡುಪಿಯ ಜಾಣನ
ಮಂದಹಾಸ ಪ್ರವೀಣನ
ಇಂದಿರಾ ಭೂರಮಣನ ।ಪ।
ಕಡಲ ತಡಿಯೊಳು ಎಸೆವ ರಂಗನ
ಕಡೆಗೋಲ ನೇಣ ಪಿಡಿದನ
ಮೃಡ ಪುರಂದರ ಅಜರೊಡೆಯನ ಈ
ರಡಿಗಳಲಿ ಶಿರ ಇಡುವೆ ನಾ ।೧।
ದೇವಕಿಯ ಜಠರದಲ್ಲಿ ಬಂದನ
ಆವಪಳ್ಳಿಯಲ್ಲಿ ನಿಂದನ
ಮಾವ ಕಂಸನ ಕೊಂದನ
ಕಾವನಯ್ಯ ಮುಕುಂದನ ।೨।
ಪೂರ್ಣಪ್ರಜ್ಞರಿಗೊಲಿದು ದ್ವಾರಕೆಯ
ಮಣ್ಣಿನೊಳು ಪ್ರಕಟಿಸಿದನ ಭ
ವಾರ್ಣವಕೆ ಪ್ಲವನಾದನ ಪ್ರ
ಸನ್ನವೆಂಕಟ ಕೃಷ್ಣನ ।೩।

---

## ೮.ಕರ್ತ ಕೃಷ್ಣಯ್ಯ ನೀ ಬಾರಯ್ಯ

ಕರ್ತ ಕೃಷ್ಣಯ್ಯ ನೀ ಬಾರಯ್ಯ ಎ-
ನ್ನಾರ್ತ ಧ್ವನಿಗೊಲಿದು ಬಾರಯ್ಯ । ಪ ।
ಸುಗುಣದ ಖಣಿಯೆ ನೀ ಬಾರಯ್ಯ ನ
ಮ್ಮಘವನೋಡಿಸಲು ನೀ ಬಾರಯ್ಯ
ಧಗೆಯೇರಿಸಿತು ತಾಪ ಸುಧಾ
ಮುಗುಳ್ನಗೆ ಮಳೆಗರೆಯೆ ಬಾರಯ್ಯ । ೧ ।
ವೈರವರ್ಗದಿ ನೊಂದೆ ಬಾರಯ್ಯ ಮ
ತ್ತಾರು ಗೆಣೆಯರಿಲ್ಲ ಬಾರಯ್ಯ
ಸೇರಿದೆ ನಾ ಶರಣ್ಯ ಬಾರಯ್ಯ ಒಳ್ಳೆ
ದಾರಿಯ ತೋರಲು ನೀ ಬಾರಯ್ಯ । ೨ ।
ವೈರಾಗ್ಯ ಭಾಗ್ಯ ಕೊಡು ಬಾರಯ್ಯ ಜ್ಞಾ-
ನಾರೋಗ್ಯದ ಭೇಷಜ ಬಾರಯ್ಯ
ಜಾರುತದಾಯು ಬೇಗ ಬಾರಯ್ಯ ಉ
ದಾರಿ ಪ್ರಸನ್ವೆಂಕಟಪ ಬಾರಯ್ಯ । ೩ ।

---

## ೯.ತಪ್ಪುಗಳೆಲ್ಲ ಪರಿಹರಿಸುವ

ತಪ್ಪುಗಳೆಲ್ಲ ಪರಿಹರಿಸುವ ನ
ಮ್ಮಪ್ಪನಲ್ಲವೆ ನೀನು
ಒಪ್ಪಿದ ಬಳಿಕವಗುಣ ನೋಡದ ತಿ
ಮ್ಮಪ್ಪನಲ್ಲವೆ ನೀನು । ಪ ।
ಬೆಳಗಿನ ಜಾವದಿ ಹರಿ ನಿನ್ನ ಸ್ಮರಣೆಗೆ
ಹಳವಿಗೆಗೊಳ್ಳದ ತಪ್ಪು

ಮಲಮೂತ್ರವಿಸರ್ಜನೆಯ ಮೃತ್ತಿಕೆಯಲಿ
ಮಲಿನವ ತೊಳೆಯದ ತಪ್ಪು
ತುಲಸಿ ವೃಂದಾವನ ಗೋಸೇವೆಗೆ
ಅಲಸಿಕೆ ಮಾಡುವ ತಪ್ಪು
ನಳಿನ ಸಖೋದಯಕರ್ಘ್ಯವ ನೀಡದ
ಕಲಿವ್ಯಾಸಂಗದ ತಪ್ಪು ।೧।
ದಿನದಿನ ಉದಯದಿ ಸ್ನಾನವ ಮಾಡದ
ತನುವಂಚನೆಯ ತಪ್ಪು
ಕ್ಷಣ ಶ್ರೀ ಹರಿಗುಣ ಜಿಜ್ಞಾಸಿಲ್ಲದ
ಮನವಂಚನೆಯ ತಪ್ಪು
ಮುನಿಸುರ ಭೂಸುರರಾರಾಧಿಸದ
ಧನ ವಂಚನೆಯ ತಪ್ಪು
ವನಜಾಕ್ಷನೆ ನಿನ್ನ ಪಾದ ವಿಮುಖ ದು
ರ್ಜನ ಸಂಸರ್ಗದ ತಪ್ಪು ।೨।
ಕಣ್ಣಲಿ ಕೃಷ್ಣಾಕೃತಿ ನೋಡದೆ ಪರ
ಹೆಣ್ಣಿನ ನೋಟದ ತಪ್ಪು
ನಿನ್ನ ಕಥಾಮೃತ ಒಲ್ಲದೆ ಹರಟೆಯ
ಮನ್ನಿಸುವ ಕಿವಿ ತಪ್ಪು
ಅನ್ನವ ನಿನಗರ್ಪಿಸದಲೆ ಹರುಷದಿ
ಉಣ್ಣುವ ನಾಲಿಗೆ ತಪ್ಪು
ಚಿನ್ಮಯ ಚರಣಕ್ಕೆರಗದೆ ಉನ್ಮತ್ತ
ರ ನಮಿಸುವ ತಲೆ ತಪ್ಪು ।೩।
ಶ್ರೀ ನಿರ್ಮಾಲ್ಯದ ವಿರಹಿತ ಸುರಭಿಯ
ಘ್ರಾಣಿಪ ನಾಸಿಕ ತಪ್ಪು
ಆನಂದದಿ ಸಂಕೀರ್ತನೆ ಮಾಡದ

ಹೀನವಿವಾದದ ಬಾಯ ತಪ್ಪು
ಶ್ರೀನಾಥಾರ್ಚನೆ ಇಲ್ಲದೂಳಿಗ
ಮಾಣದಿರುವ ಕೈ ತಪ್ಪು
ಶ್ರೀನಾರಾಯಣ ವೇಶ್ಮನಿಗೈದದ
ನಾನಾಟನ ಪಾದ ತಪ್ಪು । ೪ ।
ಯಜ್ಞಾತ್ಮಗೆ ಯಜ್ಞಾರ್ಪಿಸದೆ ಸುಖ
ಮಗ್ನಾದ ಮೇಢ್ರದ ತಪ್ಪು
ಅಗ್ರದ ಕರ್ಮವ ಶೌಚವ ಜರಿದ ಸ
ಮಗ್ರ ಗುಹ್ಯಕೃತ ತಪ್ಪು
ಅಜ್ಞಾನ ಜ್ಞಾನದಿ ಕ್ಷಣಲವಶತ
ವೆಗ್ಗಳಘ ಗಳಿಸುವ ತಪ್ಪು
ಯಜ್ಞೇಶ ಪ್ರಸನ್ವೆಂಕಟ ಕೃಷ್ಣ ನಾ
ಮಾಗ್ನಿಗೆ ತೃಣವೀ ತಪ್ಪು । ೫ ।

---

## ೧೦. ಎಂದು ಕಾಂಬುವೆ ಎನ್ನ ಸಲಹುವ

ಎಂದು ಕಾಂಬುವೆ ಎನ್ನ ಸಲಹುವ
ತಂದೆ ಉಡುಪಿಯ ಜಾಣನ
ಮಂದಹಾಸ ಪ್ರವೀಣನ
ಇಂದಿರಾ ಭೂರಮಣನ । ಪ ।
ಕಡಲ ತಡಿಯೊಳು ಎಸೆವ ರಂಗನ
ಕಡೆಗೋಲ ನೇಣ ಪಿಡಿದನ
ಮೃಡ ಪುರಂದರ ಅಜರೊಡೆಯನ ಈ
ರಡಿಗಳಲಿ ಶಿರ ಇಡುವೆ ನಾ । ೧ ।
ದೇವಕಿಯ ಜಠರದಲ್ಲಿ ಬಂದನ

ಆವಪಳ್ಳಿಯಲ್ಲಿ ನಿಂದನ
ಮಾವ ಕಂಸನ ಕೊಂದನ
ಕಾವನಯ್ಯ ಮುಕುಂದನ ।೨।
ಪೂರ್ಣಪ್ರಜ್ಞರಿಗೊಲಿದು ದ್ವಾರಕೆಯ
ಮಣ್ಣಿನೊಳು ಪ್ರಕಟಿಸಿದನ ಭ
ವಾರ್ಣವಕೆ ಪ್ಲವನಾದನ ಪ್ರ
ಸನ್ನವೆಂಕಟ ಕೃಷ್ಣನ ।೩।

---

## ೧೧. ದಡ ಸೇರಿಸು ಭವದ ಕಡಲಿನ

ದಡ ಸೇರಿಸು ಹರಿಯೆ
ಕಡೆ ಮೊದಲಿಲ್ಲದ ಕ್ಲೇಶದ ವಾರಿಯ
ಕಡು ಕಾಂಕ್ಷದ ಬಲುತೆರೆಯ ।ಪ।
ಸಾಧು ಸಮಾಗಮ ಸಚ್ಛಾಸ್ತ್ರ ಶ್ರವ
ಣಾದಿಗಳಿಲ್ಲದೆ ಕೆಡುವೆ
ಮೇದಿನಿಯೊಳು ಮೂಢಾತ್ಮನು ನಾ ಶ್ರೀ
ಪಾದವ ಹೊಂದಿಸು ಹರಿಯೆ ।೧।
ಸಾಸಿರ ನಾಮದಿ ತುಲಸೀ ಕುಸುಮವ
ಶ್ರೀಶನಿಗರ್ಪಿಸಲಿಲ್ಲ
ಹೇಸದೆ ಬಾರದುದನ್ನೆ ಬಯಸುತ
ವಾಸುದೇವ ಕೆಟ್ಟೆನಲ್ಲ ।೨।
ಮನ ವಶವಾಗದು ತನು ಮಡಿಯಾಗದು
ಕನಸಲಿ ಧರ್ಮವನರಿಯೆ
ಒಣಮಾತಲಿ ದಿನ ಹೋದವು ಪರಗತಿ
ಗನುಕೂಲಲ್ಲದು ದೊರೆಯೆ ।೩।

ದುರ್ವ್ಯಸನಕೆ ಬೇಸರೆನೆಂದಿಗೆ ಘನ
ಗರ್ವಿಲಿ ವರ್ತಿಪೆನಲ್ಲ
ಪರ್ವತ ನೆಗಹುವ ನುಡಿಯನ್ನಾಡುವೆ
ನಿರ್ವಾಹ ಕಡ್ಡಿಯೊಳಿಲ್ಲ ।೪।
ನನ್ನ ಗುಣದ ನಂಬಿಕೆ ನನಗಿಲ್ಲ
ನಿನ್ನಯ ನಾಮವೆ ಗತಿಯು
ಇನ್ನಾದರು ಕಡೆಗಣ್ಣಲೆ ನೋಡು ಪ್ರ
ಸನ್ವೆಂಕಟ ಸಿರಿಪತಿಯೆ ।೫।

---

## ೧೨. ವೆಂಕಟಾದ್ರಿವರದ ಶಂಕರನುತಪಾದ

ವೆಂಕಟಾದ್ರಿವರದ ಶಂಕರನುತಪಾದ **।ಪ।**
ಶಂಖಾರಿ ಅಹಿಪರಿಯಂಕಶಾಯಿ ಉದಾರಿ
ಕಿಂಕರಕೋಶ ಸಂಕಟನಾಶ
ಪಂಕಜನಾಭಾಸಂಖ್ಯಾತ ರವಿಭಾ ।೧।
ಗಜಬಂಧನ ನಿವಾರಿ ಕುಜಮಸ್ತಕವಿದಾರಿ
ಅಜಮಿಳರಕ್ಷ ನಿಜಜನಪಕ್ಷ
ಕುಜನ ವಿಶಿಕ್ಷಾಂಬುಜ ಪತ್ರಾಕ್ಷ ।೨।
ಕಂಸ ಮಥನಕಾರಿ ಹಂಸಡಿಬಿಕ ವೈರಿ
ಸಂಶಯಹರ ಗೋಪಾಂಸು ಲಿಪ್ತಾಂಗ ಹಿ
ಮಾಂಶುಕುಲೇಶ ಭವಶರಧಿನಾಶ ।೩।
ಭೈಷ್ಮೀ ಸತ್ಯಾರಮಣ ಭೂಷಿತ ಅಖಿಳಾಭರಣ
ದ್ವೇಷಕೃತ ದಮಘೋಷ ಜಹರ ಮ–
ಹೀಶೆಜ್ಞ ಭೋಕ್ತಾಗ್ರೇಸರ ಶಕ್ತ ।೪।
ಸ್ವಾಮಿ ತೀರ್ಥಕರ್ತ ಕಾಮಿತ ಫಲದಾತ
ಸ್ವಾಮಿ ಪ್ರಸನ್ವೆಂಕಟಾಮಲ ಮೂರ್ತಿ

ನಾ ಮೊರೆಹೊಗುವೆ ಪ್ರೇಮದ ಪ್ರಭುವೆ ।೫।
ಮಂಗಳ ತ್ರಿವೆಂಗಳಪ್ಪ ಮಂಗಳಾಂಗ ರಂಗಗೆ ಶ್ರೀ
ಮಂಗಳೆಯ ಸಂಗಗೆ ಜಗಂಗಳಾಂತರಂಗಗೆ ।ಪ।
ಕಂಗಳಿಕ್ಕದಂಗೆ ನಿಖಿಳಾಂಗ ಕಪಟಂಗೆ ಭೂ
ವೆಂಗಳರಸಂಗೆ ನರಸಿಂಗದೇವನಿಗೆ ।೧।
ತಿಂಗಳೊಲಿದ್ದಗೆ ಖಳರ ಜಂಗುಳಿ ನಾದ್ದಂಗೆ ಕಲ್ಲ
ವೆಂಗಳ ಮಾಳ್ಪಂಗೆ ಚೆಲ್ವ ಪೊಂಗೊಳಲೂದುವಂಗೆ। ೨।
ತುಂಗ ಮೋಹನಗೆ ಸತುರಂಗವಾಹನಂಗೆ ವಿ
ಹಂಗಗೆ ಭುಜಂಗಶಯನ ಪ್ರಸನ್ನವೆಂಕಟಂಗೆ ।೩।

## ೧೩. *ಅನುದಿನ ಭವಾಬ್ಧಿಯಲ್ಲಿ ಭವತರಂಗ ರಾಶಿಯಲ್ಲಿ*

*ಅನುದಿನ ಭವಾಬ್ಧಿಯಲ್ಲಿ ಭವತರಂಗ ರಾಶಿಯಲ್ಲಿ|*
*ಮುಳುಗುತಿಹೆ ಕೈಯ ಪಿಡಿಯೊ ಜನಕ ಕೃಷ್ಣಯ್ಯ || ಪ ||*
*ಶ್ರೀನಿವಾಸ ನಿನ್ನ ಭಕ್ತಿ ಮಾಡದ ಅಘವಂತನೆಂದು |*
*ಹೀನ ಜನರ್ಪಾಳಕಿಟ್ಟರೇನ ಹೇಳಲೋ |*
*ನೀನು ಪಾಲಿಪ ರಾಜ್ಯದಲ್ಲಜ್ಞಾನಿ ದೇಶಿಗನೊಬ್ಬ ಕೆಡಲು |*
*ಹಾನಿ ಹೆಚ್ಚಳ ನಿನ್ನದಲ್ಲೆ ದೀನದಯಾಳು || 1 ||*
*ಚಿತ್ತವೇಗಕ್ಕವಧಿ ಇಲ್ಲ ಹೊತ್ತುಕೊಂಡು ಕಂಡ ಕಡೆಗೆ |*
*ಸುತ್ತುತ್ತಿದೆ ತನ್ನ ದಳವ ಕೂಡಿ ರಂಗಯ್ಯ |*
*ಕರ್ತ ನಿನ್ನ ಪಾದದೆಡೆಯ ಒತ್ತಿ ನೀನಿದನಾಳಬೇಕು |*
*ಹೆತ್ತ ತಾಯಿ ಗಡಾನೆತ್ತಿಕೊಳ್ಳಯ್ಯ || 2 ||*
*ಹಳುವಗಳು ದಾರಿಕಾಣೆ ಸೆಳವಿನೊಳಾಶ್ರಯ ಕಾಣೆ |*

ನಳಿನನೇತ್ರ ನೀನೆ ಕಾಯ ಸುಲಭರೊಡೆಯ |

ನೆಲೆಯ ತೋರಾತಂಕಹಾರಿ ಒಲಿದು ವರಾಭಯವ ಬೀರಿ |

ಒಲಿಯೊ ಪ್ರಸನ್ವೆಂಕಟಾದ್ರಿನಿಲಯ ಉದಾರಿ || 3 ||

---

### 14. ನೀ ಕರುಣಿಸೊ ವಿಠಲ ನಮ್ಮ ಸಾಕೊ ಪಂಡರಿವಿಠಲ

ನೀ ಕರುಣಿಸೊ ವಿಠಲ ನಮ್ಮ ಸಾಕೊ ಪಂಡರಿವಿಠಲ| |ಪ| |

ದೋಷಿಗಳೊಳಗೆ ಹಿರಿಯನು ನಾ ನಿರ್ದೋಷಿಗಳರಸನೆ ವಿಠಲ

ಸಾಸಿವೆಯಷ್ಟು ಭಕುತಿನಾನರಿಯೆನು ಶೇಷಶಯನ ಶ್ರೀವಿಠಲ| ೧|

ಭವಸಾಗರದೊಳು ಮುಳುಗುವೆ ಸುಮ್ಮನೆ ಅವಲೋಕಿಸುವರೆ ವಿಠಲ

ನವನವ ವಿಷಯಕೆ ಮುಗ್ಗುತಲಿಹ ಮನದವಸರ ಕಾಯೊ ವಿಠಲ| ೨|

ತನುಸಂಬಂಧಿಗಳತಿ ಕಾರ್ಯಾರ್ಥಿಗಳ್ ಎನಗಾರಿಲ್ಲೊ ವಿಠಲಾ

ಬಿನುಗು ಮಾನವರನುಸರಣೆಯಲಿ ದಣಿಸದಿರಯ್ಯ ವಿಠಲ| ೩|

ನಿಶಿದಿನ ಅಶನ ವಸನಕೆ ಹೆಣಗುವೆ ಹುಸಿ ಸಂಗ್ರಹಿಸಿದೆ ವಿಠಲ

ನಿಶಿದ್ಧಗಳಂಜಿಕೆ ಇಲ್ಲವು ನರಕದ ಗಸಣೆಗೆ ಅಂಜುವೆ ವಿಠಲ| ೪|

ಜಾವಕೆ ಮಾಡುವೆ ಸಾಸಿರ ತಪ್ಪನು ಕಾವ ದಯಾಂಬುಧಿ ವಿಠಲ

ನಾ ವಡಲ್ಗೊಕ್ಕೆನೊ ಪ್ರಸನ್ವೆಂಕಟಪತಿ ಜೀವಕೆ ಹೊಣೆ ನೀ ವಿಠಲ| ೫|

---

### 15.ಯಾತಕೆಲೆ ಮನವೆ ನೀ ಭೀತಿಗೊಳುವೆ

ಯಾತಕೆಲೆ ಮನವೆ ನೀ ಭೀತಿಗೊಳುವೆ ಶ್ರೀ

ನಾಥ ಜಗತಾತ ಹೆತ್ತಾತನಿರೆ ಅನವರತ||ಪ||

ಒಡಲೊಳಿರೆ ನವಮಾಸ ಪಡಿಯ ನಡೆಸಿದರಾರು

ದೃಡಕುಚದಿ ಪಾಲ್ದುಂಬಿ ಕೊಡುವರಾರು

ನಡೆನುಡಿಗಲಿಸಿ ನಿದ್ರೆವಿಡಿಸಿ ಎಚ್ಚರಿಪರಾರು
ಕಡೆಮೊದಲಿನೊಡೆಯನಿರಲಡಿಗಡಿಗೆ ಬರಿದೆ|೧|

ಅಪ್ರಸಿದ್ಧಾತ್ಮನಿಗೆ ವಿಪ್ರಕುಲವಿತ್ತರಾರ್
ಶ್ರೀಪ್ರಜ್ಞಮತದಿ ನೆಲೆಸಿಪ್ಪರಾರ್
ಅಪ್ರಬುದ್ಧರಿಗೆ ಮತಿಕ್ಷಿಪ್ರಬೋಧಿಪನು ಮು
ಖ್ಯಪ್ರಾಣವರದ ಸುಪ್ರಧಾನನಿರೆ ನಿರುತ|೨|

ಧರೆಗೆ ಮಳೆಗರೆದು ಸಸಿಗಳನು ಬೆಳಸಿದರಾರು
ಗಿರಿವಿಪಿನ ಖಗಮೃಗದ ಹೊರುವರಾರು
ಪರಮ ಕಾರಣಿಕ ನಮ್ಮ ಪ್ರಸನ್ವೆಂಕಟನೆ ಜಗ
ದರಸೆಂದು ಶ್ರುತಿ ಸ್ಮೃತಿಯೊಳಿಹುದರಿದು ಮರೆದು|೩|

---

## ೧೬. ಬಿಡೆನೊ ನಿನ್ನಂಘ್ರಿ ಶ್ರೀನಿವಾಸ

ಬಿಡೆನೊ ನಿನ್ನಂಘ್ರಿ ಶ್ರೀನಿವಾಸ ನನ್ನ
ದುಡಿಸಿಕೊಳ್ಳೆಲೊ ಶ್ರೀನಿವಾಸ ನಿ
ನ್ನುಡಿಯ ಜೀತಲ್ಲೊ ಶ್ರೀನಿವಾಸ ನನ್ನ
ನಡೆ ತಪ್ಪು ಕಾಯೊ ಶ್ರೀನಿವಾಸ |ಪ|
ಬಡಿಯೊ ಬೆನ್ನಲಿ ಶ್ರೀನಿವಾಸ ನ
ನ್ನೊಡಲ ಹೊಯ್ಯದಿರೊ ಶ್ರೀನಿವಾಸ ನಾ
ಬಡವ ಕಾಣೆಲೊ ಶ್ರೀನಿವಾಸ ನಿ
ನ್ನೊಡಲ ಹೊಕ್ಕೆನೊ ಶ್ರೀನಿವಾಸ |1|

ಪಂಜುವಿಡಿವೆನೊ ಶ್ರೀನಿವಾಸ ನಿ
ನ್ನೆಂಜಲ ಬಳಿದುಂಬೆ ಶ್ರೀನಿವಾಸ ನಾ
ಸಂಜೆ ಉದಯಕೆ ಶ್ರೀನಿವಾಸ ಕಾ
ಳಂಜಿಯ ಪಿಡಿವೆನೊ ಶ್ರೀನಿವಾಸ |2|

ಸತ್ತಿಗೆ ಚಾಮರ ಶ್ರೀನಿವಾಸ ನಾ
ನೆತ್ತಿ ಕುಣಿವೆನೊ ಶ್ರೀನಿವಾಸ ನಿನ್ನ
ರತ್ತುನ ಹಾವಿಗೆ ಶ್ರೀನಿವಾಸ ನಾ
ಹೊತ್ತು ನಲಿವೆನೊ ಶ್ರೀನಿವಾಸ |3|

ಹೇಳಿದಂತಾಲಿಹೆ ಶ್ರೀನಿವಾಸ ನಿ
ನ್ನಾಳಿಗಾಳಾಗಿಹೆ ಶ್ರೀನಿವಾಸ ಅವ
ರೂಳಿಗವ ಮಾಳ್ಪೆ ಶ್ರೀನಿವಾಸ ನನ್ನ
ಪಾಲಿಸೊ ಬಿಡದೆ ಶ್ರೀನಿವಾಸ |4|

ನಿನ್ನ ನಾಮ ಹೋಳಿಗೆ ಶ್ರೀನಿವಾಸ ಕಳ್ಳ
ಕುನ್ನಿ ನಾನಾಗಿಹೆ ಶ್ರೀನಿವಾಸ ಕಟ್ಟಿ
ನಿನ್ನವರೊದ್ದರೆ ಶ್ರೀನಿವಾಸ ನನ
ಗಿನ್ನು ಲಜ್ಜ್ಯಾತಕೆ ಶ್ರೀನಿವಾಸ | 5 |

ಬೀಸಿ ಕೊಲ್ಲಲವರೆ ಶ್ರೀನಿವಾಸ ಮುದ್ರೆ
ಕಾಸಿ ಚುಚ್ಚಲವರೆ ಶ್ರೀನಿವಾಸ ಮಿಕ್ಕ
ಘಾಸಿಗಂಜೆನಯ್ಯ ಶ್ರೀನಿವಾಸ ಎಂಜ
ಲಾಸೆಯ ಬಂಟ ನಾ ಶ್ರೀನಿವಾಸ |6|

ಹೇಸಿ ನಾನಾದರೆ ಶ್ರೀನಿವಾಸ ಹರಿ
ದಾಸರೊಳು ಪೊಕ್ಕೆ ಶ್ರೀನಿವಾಸ ಅವರ
ಭಾಸೆಯ ಕೇಳಿಹೆ ಶ್ರೀನಿವಾಸ ಆ
ವಾಶೆಯ ಸೈರಿಸೊ ಶ್ರೀನಿವಾಸ |7|

ತಿಂಗಳವನಲ್ಲ ಶ್ರೀನಿವಾಸ ವತ್ಸ
ರಂಗಳವನಲ್ಲೊ ಶ್ರೀನಿವಾಸ ರಾ
ಜಂಗಳ ಸವಡಿಪೆ ಶ್ರೀನಿವಾಸ ಭ
ವಂಗಳ ದಾಟುವೆ ಶ್ರೀನಿವಾಸ |8|

ನಿನ್ನವ ನಿನ್ನವ ಶ್ರೀನಿವಾಸ ನಾ
ನನ್ಯವನರಿಯೆನೊ ಶ್ರೀನಿವಾಸ ಅಯ್ಯಾ
ಮನ್ನಿಸೊ ತಾಯ್ತಂದೆ ಶ್ರೀನಿವಾಸ ಪ್ರ
ಸನ್ನ ವೆಂಕಟಾದ್ರಿ ಶ್ರೀನಿವಾಸ |೯|

---

ಸಂಗ್ರಹ – ನರಹರಿಸುಮಧ್ವ
**(09042729165)**